ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 15-04-1971.

*ತ್ರಿಮೂರ್ತಿ ತಂದೆಯ ಮಕ್ಕಳ ತ್ರಿಮೂರ್ತಿ ಕರ್ತವ್ಯ* (त्रिमूर्ति बाप के बच्चों का त्रिमूर्ति कर्त्तव्य)

ತ್ರಿಮೂರ್ತಿ ತಂದೆಯ ಮಕ್ಕಳಾದ ನೀವೆಲ್ಲರೂ ತ್ರಿಮೂರ್ತಿ ಆಗಿರುವಿರಾ? ತ್ರಿಮೂರ್ತಿಗಳಾಗಿ ಮೂರೂ ಕರ್ತವ್ಯಗಳನ್ನು ಮಾಡುತ್ತಿದ್ದೀರಾ? ಈ ಸಮಯದಲ್ಲಿ ಎರಡು ಕರ್ತವ್ಯಗಳು ಮಾಡುತ್ತಿರುವಿರೋ ಅಥವಾ ಮೂರು ಮಾಡುತ್ತೀರೊ? ಯಾವ ಕರ್ತವ್ಯವನ್ನು ಮಾಡುತ್ತಿದ್ದೀರಿ? ಮೂರೂ ಕರ್ತವ್ಯಗಳನ್ನು ಜೊತೆ ಜೊತೆಯಲ್ಲಿ ಮಾಡುತ್ತಿದ್ದೀರೊ? ತ್ರಿಮೂರ್ತಿಗಳಂತೂ ಆಗಿರುವಿರಿ ತಾನೆ? ತ್ರಿಮೂರ್ತಿಯಾಗಿರುವಂತೆ ತ್ರಿಕಾಲದರ್ಶಿಯೂ ಆಗಿರುವಿರಾ? ಪ್ರತಿ ಕರ್ಮ ಅಥವಾ ಉತ್ಪತ್ತಿ ಆಗುತ್ತಿರುವ ಪ್ರತಿ ಸಂಕಲ್ಪವನ್ನು ತ್ರಿಕಾಲದರ್ಶಿಯಾಗಿ ನಂತರ ಸಂಕಲ್ಪವನ್ನು ಕರ್ಮದಲ್ಲಿ ತರುತ್ತೀರಾ? ಮೂರೂ ಕಾರ್ಯಗಳು ಸದಾ ಜೊತೆ ಜೊತೆಯಲ್ಲಿ ನಡೆಯುತ್ತದೆಯೇ? ಏಕೆಂದರೆ ಹಳೆಯ ಸಂಸ್ಕಾರ ಮತ್ತು ಸ್ವಭಾವ ಮತ್ತು ವ್ಯರ್ಥ ಸಂಕಲ್ಪಗಳನ್ನೇ ವಿನಾಶ ಮಾಡದಿದ್ದರೆ ಹೊಸ ರಚನೆ ಹೇಗೆ ಆಗುವುದು. ಮತ್ತು ಹೊಸ ರಚನೆ ಮಾಡಿ ಅದರ ಪಾಲನೆ ಮಾಡದಿದ್ದರೆ ಪ್ರ್ಯಾಕ್ಟಿಕಲ್ ಹೇಗೆ ಕಂಡುಬರುವಿರಿ. ಆದ್ದರಿಂದ ತ್ರಿಮೂರ್ತಿ ತಂದೆಯ ತ್ರಿಮೂರ್ತಿ ಮಕ್ಕಳು ಮೂರೂ ಕರ್ತವ್ಯಗಳನ್ನು ಜೊತೆ ಜೊತೆಯಲ್ಲಿ ಮಾಡುತ್ತಿರುವಿರಿ, ವಿಕರ್ಮ ಅಥವಾ ವ್ಯರ್ಥ ಸಂಕಲ್ಪಗಳ ವಿನಾಶವೂ ಮಾಡುತ್ತಿರುವಿರಿ. ಇದನ್ನು ಈಗ ಇನ್ನೂ ತೀವ್ರವಾಗಿ ಮಾಡಬೇಕು. ಕೇವಲ ನಿಮ್ಮ ವ್ಯರ್ಥ ಸಂಕಲ್ಪ ಅಥವಾ ವಿಕರ್ಮ ಭಸ್ಮ ಮಾಡುವುದಷ್ಟೇ ಅಲ್ಲ ನೀವು ವಿಶ್ವಕಲ್ಯಾಣಕಾರಿ ಆಗಿರುವಿರಿ, ಆದ್ದರಿಂದ ಇಡೀ ವಿಶ್ವದ ವಿಕರ್ಮದ ಹೊರೆಯನ್ನೂ ಹಗುರ ಮಾಡಬೇಕು ಮತ್ತುಅನೇಕ ಆತ್ಮರ ವ್ಯರ್ಥ ಸಂಕಲ್ಪಗಳನ್ನು ಅಳಿಸಿ ಹಾಕಬೇಕಾಗಿದೆ. ಆದ್ದರಿಂದ **ವರ್ತಮಾನ ಸಮಯ ಇಡೀ ವಿಶ್ವದ ವಿಕರ್ಮಗಳ ಭಾರವನ್ನು ಹಗುರ ಮಾಡಬೇಕು ಮತ್ತು ಅನೇಕಾತ್ಮರ ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಿ ಮಾಡಬೇಕು ಇದೇ ಶಕ್ತಿಯರ ಕರ್ತವ್ಯ**. ವರ್ತಮಾನ ಸಮಯ ಈ ವಿನಾಶದ ಕರ್ತವ್ಯದ ಮತ್ತು ಜೊತೆ ಜೊತೆಗೆ ಹೊಸ ಶುದ್ಧ ಸಂಕಲ್ಪಗಳ ಸ್ಥಾಪನೆಯ ಕರ್ತವ್ಯ- ಎರಡೂ ಪೂರ್ಣ ಬಲದಿಂದ ನಡೆಯಬೇಕು. ಯಾವ ರೀತಿ ಬಹಳ ತೀವ್ರ ಗತಿಯ ಯಂತ್ರ ಇದ್ದರೆ ಒಂದು ಸೆಕೆಂಡಿನಲ್ಲಿ ಆ ವಸ್ತುವಿನ ರೂಪ, ಬಣ್ಣ, ಗುಣ ಕರ್ತವ್ಯ ಇತ್ಯಾದಿ ಎಲ್ಲವೂ ಬದಲಾಗುತ್ತದೆ. ಯಂತ್ರದಲ್ಲಿ ಇಟ್ಟರೆ ಸಾಕು ಬದಲಾಗಿಬಿಡಬೇಕು. ಅದೇ ರೀತಿ ಈ ವಿನಾಶ ಮತ್ತು ಸ್ಥಾಪನೆಯ ಯಂತ್ರವೂ ಸಹ ಬಹಳ ತೀವ್ರ ಗತಿಯಲ್ಲಿ ನಡೆಯುವುದಿದೆ. ಯಾವ ರೀತಿ ಯಂತ್ರದಲ್ಲಿ ಹಾಕಿದಾಗ ಹೇಗೆ ಯಾವುದೇ ವಸ್ತುವಿನ ರೂಪ, ಬಣ್ಣ, ಗುಣ ಬದಲಾಗುತ್ತದೆಯೋ ಅದೇ ರೀತಿ ಈ ಆತ್ಮಿಕ ಯಂತ್ರದಲ್ಲಿ ನಿಮ್ಮ ಮುಂದೆ ಯಾರೇ ಬರಲಿ. ಬರುತ್ತಿದ್ದಂತೆ ಅವರ ಸಂಕಲ್ಪ, ಸ್ವರೂಪ, ಗುಣ ಮತ್ತು ಕರ್ತವ್ಯ ಬದಲಾಗಬೇಕು. ಇಂತಹ ಯಂತ್ರವು ಈಗ ಪ್ರತ್ಯಕ್ಷ ರೂಪದಲ್ಲಿ ನಡೆಯುವುದಿದೆ. ಕೇವಲ ಆತ್ಮರದ್ದಷ್ಟೇ ಅಲ್ಲ ಆದರೆ ಪಂಚತತ್ವಗಳ ಗುಣ, ಮತ್ತು ಕರ್ತವ್ಯವೂ ಸಹ ಬದಲಾಗುವುದಿದೆ. ಇಂತಹ ಮಶೀನರಿ ಈಗ ಪ್ರ್ಯಾಕ್ಟಿಕಲ್‌ನಲ್ಲಿ ನಡೆಯುವುದು. ಆದ್ದರಿಂದ ಹೇಳಿದೆವು ವಿನಾಶ ಮತ್ತು ಸ್ಥಾಪನೆ-ಎರಡೂ ಜೊತೆ ಜೊತೆಯಲ್ಲಿ ನಡೆಯುತ್ತಿವೆ . ಈಗ ಇನ್ನೂ ತೀವ್ರಗತಿಯಿಂದ ನಡೆಯುವುದು. ಯಾವ ರೀತಿ ಮಹಾದನಿಗಳ ಬಳಿ ಸದಾ ಭಿಕ್ಷುಕರ ಹಿಂಡು ಇರುತ್ತದೆಯೋ ಅದೇ ರೀತಿ ನಿಮ್ಮೆಲ್ಲರ ಬಳಿ ಭಿಕ್ಷುಕರ ಹಿಂಡು ಬರುತ್ತದೆ. ನಿಮ್ಮ ಬಳಿ ಪ್ರದರ್ಶನದಲ್ಲಿ ಗದ್ದಲವಾದಾಗ ಏನು ಮಾಡುತ್ತೀರಿ? ಸಾಲಿನಲ್ಲಿ ನಿಲ್ಲಿಸಿ ಸಂಕ್ಷಿಪ್ತವಾಗಿ ಕೇವಲ ಸಂದೇಶವನ್ನು ಕೊಡುತ್ತೀರಿ. ರಚನೆಯ ಜ್ಞಾನ ಕೊಡಲು ಆಗುವುದಿಲ್ಲ ಕೇವಲ ತಂದೆಯ ಪರಿಚಯ ಮತ್ತು ಸಂದೇಶ ಕೊಡಲು ಸಾಧ್ಯವಾಗುತ್ತದೆ. ಅದೇ ರೀತಿ ಯಾವಾಗ ಭಿಕ್ಷುಕರ ಗದ್ದಲ ಉಂಟಾಗುತ್ತದೆಯೋ ಆಗ ಇದೇ ಸಂದೇಶವನ್ನು ಕೊಡುವಿರಿ. ಆದರೆ ಆ ಒಂದು ಸೆಕೆಂಡಿನ ಸಂದೇಶ ಬಹಳ ಶಕ್ತಿಶಾಲಿಯಾಗಿರುತ್ತದೆ. ಆ ಸಂದೇಶ ಆ ಆತ್ಮರಲ್ಲಿ ಸಂಸ್ಕಾರದ ರೂಪದಲ್ಲಿ ಸಮಾವೇಶವಾಗುತ್ತದೆ. ಸರ್ವ ಧರ್ಮದ ಆತ್ಮರು ಇದೇ ಭಿಕ್ಷೆಯನ್ನು ಬೇಡಲು ಬರುತ್ತಾರೆ. ಕ್ರಿಸ್ತನೂ ಭಿಕ್ಷುಕನ ರೂಪದಲ್ಲಿದ್ದಾನೆ ಎಂದು ಹೇಳುತ್ತಾರಲ್ಲವೆ. ಹೀಗೆ ಧರ್ಮ ಪಿತರೂ ಸಹ ನಿಮ್ಮ ಮುಂದೆ ಭಿಕ್ಷುಕರ ರೂಪದಲ್ಲಿ ಬರುತ್ತಾರೆ. ಅವರಿಗೆ ಏನು ಭಿಕ್ಷೆ ಕೊಡುವಿರಿ? ಇದೇ ಸಂದೇಶ. ಎಷ್ಟು ಶಕ್ತಿಶಾಲಿ ಸಂದೇಶವಾಗಿರುತ್ತದೆ ಎಂದರೆ ಇದೇ ಸಂದೇಶದ ಶಕ್ತಿಶಾಲಿ ಸಂಸ್ಕಾರ ಧರ್ಮ

ಸ್ಥಾಪನೆಗೆ ನಿಮಿತ್ತ ಆಗುತ್ತದೆ. ಆ ಸಂಸ್ಕಾರ ಅವಿನಾಶಿ ಆಗುತ್ತದೆ. ಏಕೆಂದರೆ ಅಂತಿಮ ಸಮಯದಲ್ಲಿ ಸಂಪೂರ್ಣ ಸ್ಥಿತಿಯ ನಿಮ್ಮ ಸಂಸ್ಕಾರವೂ ಅವಿನಾಶಿಯಾಗಿರುತ್ತವೆ. ಈಗ ಸಂಸ್ಕಾರಗಳು ಅವಿನಾಶಿ ಮಾಡಿಕೊಳ್ಳುತ್ತಿರುವಿರಿ. ಆದ್ದರಿಂದ ಯಾವಾಗ ಅನ್ಯರಿಗೆ ಸಂದೇಶ ಕೊಡುತ್ತೀರಿ, ಪರಿಶ್ರಮ ಪಡುತ್ತೀರಿ, ಅದು ಸದಾ ಕಾಲ ಈಗ ಇರುವುದಿಲ್ಲ. ಸ್ವಲ್ಪ ಸಮಯ ಇರುತ್ತದೆ ನಂತರ ಸಡಿಲವಾಗಿ ಬಿಡುತ್ತಾರೆ. ಆದರೆ ಅಂತಿಮ ಸಮಯದಲ್ಲಿ ನಿಮ್ಮ ಸಂಸ್ಕಾರವೇ ಅವಿನಾಶಿಯಾಗುತ್ತವೆ. ಆದ್ದರಿಂದ ಅವಿನಾಶಿ ಸಂಸ್ಕಾರಗಳ ಶಕ್ತಿ ಇರುವುದರಿಂದ ಅವರ ಸಂಸ್ಕಾರಗಳೂ ಅವಿನಾಶಿ ಆಗುವಂತೆ ಅವರಿಗೂ ಶಿಕ್ಷಣ ಅಥವಾ ಸಂದೇಶ ಕೊಡುವಿರಿ. ಹಾಗಾದರೆ ಈಗ ಯಾವ ಪುರುಷಾರ್ಥ ಮಾಡಬೇಕು? ಸಂಸ್ಕಾರಗಳನ್ನಂತೂ ಬದಲಾವಣೆ ಮಾಡಲೇಬೇಕು ಆದರೆ ಈಗ ಅವಿನಾಶಿಯ ಮುದ್ರೆ ಒತ್ತಬೇಕು. ಯಾವ ರೀತಿ ಸರ್ಕಾರದ ಮುದ್ರೆ ಹಾಕುತ್ತಾರೆ ಅಲ್ಲವೆ, ಸೀಲ್ ಮಾಡುತ್ತಾರೆ, ಅದನ್ನು ಯಾರೂ ತೆಗೆಯಲು ಸಾಧ್ಯವಿಲ್ಲ. ಎಂತಹ ಸೀಲ್ ಹಾಕಬೇಕೆಂದರೆ ಮಾಯೆಗೆ ಅರ್ಧ ಕಲ್ಪದವರೆಗೆ ಅದನ್ನು ತೆಗೆಯಲು ಸಾಧ್ಯವಾಗಿರಬಾರದು. ಮಾಸ್ಟರ್ ತ್ರಿಕಾಲದರ್ಶಿಯಾಗಿ ಸಂಕಲ್ಪಗಳನ್ನು ಕರ್ಮದಲ್ಲಿ ತಂದಾಗ ಇದು ಸಾಧ್ಯವಾಗುವುದು. ಯಾವುದೇ ಸಂಕಲ್ಪ ಉತ್ಪನ್ನ ಆಗಲಿ, ಸಂಕಲ್ಪವನ್ನೇ ಪರಿಶೀಲನೆ ಮಾಡಿರಿ. ಮಾಸ್ಟರ್ ತ್ರಿಕಾಲದರ್ಶಿ ಸ್ಟೇಜ್ ಮೇಲೆ ಇದ್ದೇನೆಯೇ? ಆ ಸ್ಟೇಜ್ ಮೇಲೆ ಇದ್ದು ಕರ್ಮ ಮಾಡಿದಾಗ ಯಾವ ಕರ್ಮವೂ ವ್ಯರ್ಥವಾಗುವುದಿಲ್ಲ. ವಿಕರ್ಮದ ಮಾತಂತೂ ಇಲ್ಲವೇ ಇಲ್ಲ. ಈಗ ವಿಕರ್ಮಗಳ ಖಾತೆಯಿಂದ ಮೇಲೆ ಬಂದಿರುವಿರಿ. ವಿಕಲ್ಪವೂ ಸಮಾಪ್ತಿ ಆದಾಗ ವಿಕರ್ಮವೂ ಸಮಾಪ್ತಿ ಆಗುತ್ತದೆ. ಈಗ ವ್ಯರ್ಥ ಕರ್ಮ ಮತ್ತು ವ್ಯರ್ಥ ಸಂಕಲ್ಪಗಳ ಮಾತು. ಈ ವ್ಯರ್ಥವನ್ನು ಬದಲಾವಣೆ ಮಾಡಿ ಸಮರ್ಥ ಸಂಕಲ್ಪ ಮತ್ತು ಸಮರ್ಥ ಕಾರ್ಯ ಮಾಡಬೇಕು. ಇದಕ್ಕೆ ಹೇಳುತ್ತಾರೆ ಸಂಪೂರ್ಣ ಸ್ಥಿತಿ. ಈಗ ಮಹಾದಾನಿ ಆಗಿರುವಿರಾ?

**ಎಷ್ಟು ಪ್ರಕಾರದ ದಾನ ಮಾಡುತ್ತೀರಿ? ಡಬಲ್ ದಾನಿ ಆಗಿರುವಿರೋ ಅಥವಾ ಟ್ರಿಪಲ್ ಅಥವಾ ಅದಕ್ಕಿಂತಲೂ ಹೆಚ್ಚು ಮಾಡುತ್ತೀರೋ? (ಪ್ರತಿಯೊಬ್ಬರೂ ತಮ್ಮ ವಿಚಾರವನ್ನು ತಿಳಿಸಿದರು) ಮುಖ್ಯ ಮೂರು ದಾನ ತಿಳಿಸಿದಿರಿ, ಜ್ಞಾನದ ದಾನ, ಯೋಗದ ಮೂಲಕ ಶಕ್ತಿಗಳ ದಾನವನ್ನೂ ಮಾಡುತ್ತಿರುವಿರಿ ಮತ್ತು ಮೂರನೇಯದಾಗಿದೆ, ಕರ್ಮದ ಮೂಲಕ ಗುಣಗಳ ದಾನ. ಒಂದಾಗಿದೆ ಮನಸ್ಸಿನಿಂದ ದಾನ, ಎರಡನೇಯದಾಗಿದೆ ವಾಚಾ ಮತ್ತು ಮೂರನೇಯದಾಗಿದೆ ಕರ್ಮದ ಮೂಲಕ ದಾನ. ದಿನವನ್ನು ಆರಂಭ ಮಾಡುವಾಗ ಅದರಲ್ಲಿ ಮೊದಲು ಇಂದು ಯಾವ ಯಾವ ರೂಪದಲ್ಲಿ ಮೂರೂ ದಾನವನ್ನು ಮಾಡಬೇಕು ಎನ್ನುವುದರ ಬಗ್ಗೆ ಸದಾ ಯೋಜನೆ ಮಾಡಿಕೊಳ್ಳಿ ಮತ್ತು ದಿನ ಸಮಾಪ್ತಿ ಆದಾಗ "ನಾನು ಮಹಾದಾನಿ ಆಗಿದ್ದೇನೆಯೇ? ಮೂರು ಪ್ರಕಾರದ ದಾನ ಮಾಡಿದ್ದೇನೆಯೇ? ಎಂದು ಪರಿಶೀಲನೆ ಮಾಡಿಕೊಳ್ಳಿ, ಏಕೆಂದರೆ ಮೂರು ಪ್ರಕಾರದ ದಾನದ ತನ್ನ ತನ್ನದೇ ಆದ ಪ್ರಾರಬ್ಧ ಮತ್ತು ಪ್ರಾಪ್ತಿ ಇದೆ.** ಯಾವ ರೀತಿ ಭಕ್ತಿ ಮಾರ್ಗದಲ್ಲಿ ಯಾರು ಯಾವ ಯಾವ ಪ್ರಕಾರದ ದಾನ ಮಾಡುತ್ತಾರೆ ಅವರಿಗೆ ಆ ಪ್ರಕಾರದ ಪ್ರಾಪ್ತಿ ಆಗುತ್ತದೆಯೋ ಅದೇ ರೀತಿ ಈ ಮಹಾನ್ ಜೀವನದಲ್ಲಿಯೂ ಸಹ ಯಾರು ಎಷ್ಟು ಮತ್ತು ಹೇಗೆ ದಾನ ಮಾಡುತ್ತಾರೆಯೋ ಅಷ್ಟು ಮತ್ತು ಹಾಗೆಯೇ ಭವಿಷ್ಯವಾಗುತ್ತದೆ. ಕೇವಲ ಭವಿಷ್ಯ ಅಲ್ಲ ಪ್ರತ್ಯಕ್ಷ ಫಲವೂ ಸಿಗುತ್ತದೆ. ಯಾರಾದರೂ ವಾಣಿಯ ಮತ್ತು ಕರ್ಮದ ದಾನ ಮಾಡುವುದಿಲ್ಲ ಕೇವಲ ಮನಸ್ಸಿನಿಂದ ದಾನ ಮಾಡುತ್ತಾರೆ ಅವರಿಗೆ ಪ್ರತ್ಯಕ್ಷ ಫಲ ಬೇರೆ ರೀತಿ ಸಿಗುತ್ತದೆ. ನೀವು ಈಗ ಕರ್ಮ ಸಿದ್ಧಾಂತವನ್ನು ಚೆನ್ನಾಗಿ ತಿಳಿದುಕೊಂಡಿರುವಿರಿ ಅಲ್ಲವೆ. ಮೂರೂ ದಾನದ ಪ್ರಾಪ್ತಿ ತನ್ನ ತನ್ನದೇ ಆಗಿದೆ. ಯಾರು ಮೂರೂ ದಾನಗಳನ್ನು ಮಾಡುತ್ತಾರೆಯೋ ಅವರಿಗೆ ಮೂರೂ ಫಲ ಪ್ರತ್ಯಕ್ಷ ರೂಪದಲ್ಲಿ ಸಿಗುತ್ತದೆ. ನೀವು ಕರ್ಮದ ಗತಿಯನ್ನು ತಿಳಿದಿರುವಿರಿ ಅಲ್ಲವೆ. ಹೇಳಿರಿ, ಮನಸಾ ದಾನದ ಪ್ರತ್ಯಕ್ಷ ಫಲ ಯಾವುದು? ಮನಸಾ ದಾನ ಮಾಡುವವರಿಗೆ ಪ್ರತ್ಯಕ್ಷ ಫಲ ಇದೇ ಪ್ರಾಪ್ತಿ ಆಗುತ್ತದೆ. ಒಂದು, ಅವರು ತಮ್ಮ ಮನಸಾ ಅರ್ಥಾತ್ ಸಂಕಲ್ಪಗಳ ಮೇಲೆ ಒಂದು ಸೆಕೆಂಡಿನಲ್ಲಿ ವಿಜಯೀ ಆಗುತ್ತಾರೆ ಅರ್ಥಾತ್ ಸಂಕಲ್ಪಗಳ ಮೇಲೆ ವಿಜಯೀ ಆಗುವ ಶಕ್ತಿ ಪ್ರಾಪ್ತಿ ಆಗಿರುತ್ತದೆ. ಮತ್ತು ಯಾರು ಎಷ್ಟೇ ಚಂಚಲ ಸಂಕಲ್ಪವುಳ್ಳವರಾಗಿರಲಿ ಅಂದರೆ ಒಂದು ಸೆಕೆಂಡ್ ಸಹ ಅವರ ಮನಸ್ಸು ಒಂದು ಸಂಕಲ್ಪದಲ್ಲಿ ಸ್ಥಿರ ಆಗದೇ ಇರಬಹುದು ಇಂತಹ ಚಂಚಲ ಸಂಕಲ್ಪವಿರುವವರನ್ನೂ ಸಹ ತಮ್ಮ ವಿಜಯದ ಶಕ್ತಿಯಿಂದ ಸ್ವಲ್ಪ ಸಮಯದವರೆಗಾದರೂ ಶಾಂತ ಮತ್ತು ಚಂಚಲತೆಯಿಂದ ಅಚಲರನ್ನಾಗಿ ಮಾಡುತ್ತಾರೆ. ಯಾವ ರೀತಿ ದುಃಖದಲ್ಲಿ

ಒದ್ದಾಡುತ್ತಿರುವವರನ್ನು ಇಂಜೆಕ್ಶನ್ ಕೊಟ್ಟು ಪ್ರಜ್ಞಾಹೀನರನ್ನಾಗಿ ಮಾಡಿದಾಗ ಅವರ ದುಃಖದ ಚಂಚಲತೆ ಸಮಾಪ್ತಿ ಆಗುತ್ತದೆಯೋ ಅದೇ ರೀತಿ ಮನಸಾ ಮೂಲಕ ಮಹಾದಾನಿ ಆಗುವವರು ತಮ್ಮ ದೃಷ್ಟಿ, ವೃತ್ತಿ ಮತ್ತು ಸ್ಮೃತಿಯ ಶಕ್ತಿಯಿಂದ ಹೀಗೆ ಅವರಿಗೆ ಶಾಂತಿಯ ಅನುಭವ ಮಾಡಿಸಲು ಸಾಧ್ಯವಿದೆ. ಆದರೆ ಸ್ವಲ್ಪ ಸಮಯಕ್ಕಾಗಿ. ಏಕೆಂದರೆ ಅವರಿಗೆ ತಮ್ಮದೇ ಆದ ಪುರುಷಾರ್ಥವಿರುವುದಿಲ್ಲ. ಆದರೆ ಮಹಾದಾನಿಯ ಶಕ್ತಿಯ ಪ್ರಭಾವದಿಂದ ಸ್ವಲ್ಪ ಸಮಯದವರೆಗೆ ಅವರು ಅನುಭವ ಮಾಡಲು ಸಾಧ್ಯವಿದೆ. ಹೀಗೆ ಯಾರು ಮನಸಾ ಮಹಾದಾನಿಯಾಗಿರುತ್ತಾರೆಯೋ ಅವರ ಸಂಕಲ್ಪದಲ್ಲಿ ಎಷ್ಟು ಶಕ್ತಿ ಇರುತ್ತದೆ ಎಂದರೆ ಸಂಕಲ್ಪ ಮಾಡಿದ ತಕ್ಷಣ ಅದು ಸಿದ್ಧಿ ಆಗುತ್ತದೆ. ಆದ್ದರಿಂದ ಮನಸಾ-ಮಹಾದಾನಿ ಆದವರು ಸಂಕಲ್ಪಗಳ ಸಿದ್ಧಿಯ ಪ್ರಾಪ್ತಿ ಮಾಡಿಕೊಳ್ಳುವವರಾಗುತ್ತಾರೆ. ಎಲ್ಲಿ ಸಂಕಲ್ಪ ಬೇಕೋ ಅಲ್ಲಿ ಸಂಕಲ್ಪಗಳನ್ನು ಸ್ಥಿರ ಮಾಡುತ್ತಾರೆ. ಸಂಕಲ್ಪಗಳಿಗೆ ವಶವಾಗುವುದಿಲ್ಲ ಆದರೆ ಸಂಕಲ್ಪ ಅವರ ವಶವಾಗಿರುತ್ತವೆ. ಯಾವ ಸಂಕಲ್ಪಗಳ ರಚನೆ ರಚಿಸಬೇಕಾಗಿದೆಯೋ ಅದನ್ನೇ ರಚಿಸುತ್ತಾರೆ. ಸಂಕಲ್ಪಗಳ ವಿನಾಶ ಮಾಡಬೇಕಾದಾಗ ವಿನಾಶ ಮಾಡುತ್ತಾರೆ. ಹೀಗೆ ಇಂತಹ ಮಹಾದಾನಿಗಳಲ್ಲಿ ಸಂಕಲ್ಪಗಳನ್ನು ರಚನೆ ಮಾಡುವ, ಸಂಕಲ್ಪಗಳನ್ನು ವಿನಾಶ ಮಾಡುವ ಮತ್ತು ಸಂಕಲ್ಪಗಳನ್ನು ಪಾಲನೆ ಮಾಡುವ ಮೂರೂ ಶಕ್ತಿಗಳು ಇರುತ್ತವೆ. ಇದಾಗಿದೆ ಮನಸಾ ಮಹಾದಾನ. ಮಾಸ್ಟರ್ ಸರ್ವಶಕ್ತಿವಂತನ ಪ್ರತ್ಯಕ್ಷ ಸ್ವರೂಪ ಕಂಡು ಬರುತ್ತಿದೆ ಎಂದು ತಿಳಿಯಿರಿ. ತಿಳಿಯಿತೆ?

ಅವರು ಮಾಸ್ಟರ್ ಸರ್ವಶಕ್ತಿವಂತರಾದರು ಮತ್ತು ಯಾರು ವಾಚಾದಿಂದ ಮಹಾದಾನಿ ಆಗಿರುತ್ತಾರೆಯೋ ಅವರಿಗೆ ಏನು ಸಿಗುತ್ತದೆ? ಅವರು ಮಾಸ್ಟರ್ ಜ್ಞಾನಪೂರ್ಣರು. ಅವರ ಒಂದೊಂದು ಶಬ್ದವೂ ಬಹಳ ಅಮೂಲ್ಯವಾಗಿರುತ್ತವೆ. ಒಂದು ರತ್ನದ ಬೆಲೆ ಅನೇಕ ರತ್ನಗಳಿಗಿಂತ ಅಧಿಕವಾಗಿರುತ್ತವೆ. ವಾಚಾದಿಂದ ನೀವು ರತ್ನಗಳ ದಾನ ಮಾಡುತ್ತೀರಿ ಅಲ್ಲವೆ. ಆದ್ದರಿಂದ ಯಾವ ಜ್ಞಾನ ರತ್ನಗಳ ದಾನ ಅವರು ಮಾಡುತ್ತಾರೆಯೋ ಆ ಒಂದೊಂದು ರತ್ನ ಎಷ್ಟು ಅಮೂಲ್ಯವಾಗಿರುತ್ತದೆ ಎಂದರೆ ಅವರ ಒಂದೊಂದು ವಚನವನ್ನು ಕೇಳಲು ಅನೇಕ ಆತ್ಮರು ಬಾಯಾರಿರುತ್ತಾರೆ. ಒಂದು ವಚನ ಅನೇಕ ಬಾಯಾರಿರುವ ಆತ್ಮರ ಬಾಯಾರಿಕೆಯನ್ನು ನೀಗಿಸುವಂತಹದಾಗಿರುತ್ತದೆ. ಮಾಸ್ಟರ್ ಜ್ಞಾನಪೂರ್ಣ, ಅಮೂಲ್ಯ ಮತ್ತು ಮೂರನೇಯದಾಗಿ ಬುದ್ಧಿವಂತರಾಗುತ್ತಾರೆ. ಅವರ ಒಂದೊಂದು ಶಬ್ದದಲ್ಲಿ ಸಾರ ತುಂಬಿರುತ್ತದೆ. ಸಾರ ಇಲ್ಲದೇ ಯಾವ ಶಬ್ದವೂ ಇರುವುದಿಲ್ಲ. ಅವರು ಇಂತಹ ಸಾರದಿಂದ ಮಾತನಾಡಿದಾಗ ಇವರು ಬಹಳ ಬುದ್ಧಿವಂತರು ಎಂದು ಹೇಳುತ್ತಾರಲ್ಲವೆ. ವಾಣಿಯ ಮೂಲಕ ಸಾರ ಗೊತ್ತಾಗುತ್ತದೆ. ಇದಾಗಿದೆ ಲಕ್ಷಣ. ಪ್ರಾಪ್ತಿ ಏನಾಗಿರುತ್ತದೆ? ವಾಚಾದ ದಾನಿ ಆದವರಿಗೆ ಒಂದು ಬಹಳ ಖುಷಿ ಇರುತ್ತದೆ, ಏಕೆಂದರೆ ಧನವನ್ನು ನೋಡಿ ಹರ್ಷಿತರಾಗುತ್ತಾರಲ್ಲವೆ. ಮತ್ತು ಅವರೆಂದೂ ಅಸಂತುಷ್ಟ ಆಗುವುದಿಲ್ಲ. ಏಕೆಂದರೆ ಖಜಾನೆ ಭರ್ ಪೂರ್ ಆಗಿರುವುದರಿಂದ, ಯಾವ ಅಪ್ರಾಪ್ತಿ ವಸ್ತು ಇಲ್ಲದೇ ಇರುವುದರಿಂದ ಸದಾ ಹರ್ಷಿತ ಮತ್ತು ಸಂತುಷ್ಟ ಆಗಿರುತ್ತಾರೆ. ಅವರ ಒಂದೊಂದು ಮಾತು ಬಾಣದಂತೆ ನಾಟುತ್ತದೆ. ಯಾರಿಗೆ ಏನು ಹೇಳುತ್ತಾರೆ ಅದು ಅವರಿಗೆ ನಾಟುತ್ತದೆ. ಅವರ ಮಾತುಗಳು ಪ್ರಭಾವಶಾಲಿಯಾಗಿರುತ್ತವೆ. ವಾಣಿಯಿಂದ ದಾನ ಮಾಡುವುದರಿಂದ ವಾಣಿಯಲ್ಲಿ ಬಹಳ ಗುಣಗಳು ಬರುತ್ತವೆ. ಸ್ಥಿತಿಯಲ್ಲಿ ಸಹಜವಾಗಿಯೇ ಖುಷಿಯ ಪ್ರಾಪ್ತಿ ಆಗುತ್ತದೆ. ಪ್ರಾಪ್ತಿ ಮಾಡಿಕೊಳ್ಳುವ ಪುರುಷಾರ್ಥ ಮಾಡುವುದಿಲ್ಲ ಆದರೆ ಸ್ವತಃ ಪ್ರಾಪ್ತಿ ಆಗುತ್ತದೆ. ಯಾವ ರೀತಿ ಗಣಿಯಿಂದ ಯಾವುದಾದರೂ ವಸ್ತು ಹೊರ ತಂದಾಗ ಅಖಂಡವಾಗಿರುತ್ತದೆಯಲ್ಲವೆ. ಅದೇ ರೀತಿ ಒಳಗಿನಿಂದ ಖುಷಿ ಸ್ವತಃ ಆಗುತ್ತಿರುತ್ತದೆ. ಇದು ವರದಾನದ ರೂಪದಲ್ಲಿ ಪ್ರಾಪ್ತಿ ಆಗುತ್ತದೆ. ಖುಷಿಗಾಗಿ ಪುರುಷಾರ್ಥ ಮಾಡಲಿಲ್ಲ, ವಾಣಿಯಿಂದ ದಾನ ಮಾಡಲು ಪುರುಷಾರ್ಥ ಮಾಡಿದ್ದು, ಪ್ರಾಪ್ತಿ ಆದದ್ದು ಖುಷಿ.

ಕರ್ಮಣಾದಿಂದ ಗುಣಗಳ ದಾನ ಮಾಡುವುದರಿಂದ ಯಾವ ಮೂರ್ತಿ ಆಗುತ್ತೀರಿ? ಫರಿಶ್ತಾ, ಕರ್ಮ ಅರ್ಥಾತ್ ಗುಣಗಳ ದಾನ ಮಾಡುವುದರಿಂದ ಅವರ ಚಲನೆ ಮತ್ತು ಚಹರೆ ಎರಡೂ ಫರಿಶ್ತೆಗಳ ತರಹ ಕಾಣುವುದು. ಎರಡೂ ಪ್ರಕಾರದ ಪ್ರಕಾಶವಿರುತ್ತದೆ ಅರ್ಥಾತ್ ಪ್ರಕಾಶಮಯವಾಗಿ ಮತ್ತು ಹಗುರತೆ ಸಹ ಇರುತ್ತದೆ. ಯಾವ ಹೆಜ್ಜೆ ಇಡುತ್ತಾರೆಯೋ ಅದು ಹಗುರವಾಗಿರುತ್ತದೆ. ಎಂದೂ ಹೊರೆ ಅನುಭವ ಆಗುವುದಿಲ್ಲ. ಯಾವುದೋ ಶಕ್ತಿ ನಡೆಸುತ್ತಿದೆ ಎಂದು ಮತ್ತು ಪ್ರತಿ ಕರ್ಮದಲ್ಲಿ ಸಹಾಯದ ಅನುಭೂತಿ ಆಗುತ್ತದೆ. ಪ್ರತಿ ಕರ್ಮದಲ್ಲಿ ಸರ್ವರಿಂದ ಪ್ರಾಪ್ತಿ ಆಗಿರುವ ವರದಾನ ಎಂದು ಅನುಭವ ಮಾಡುತ್ತಾರೆ.

ಎರಡನೇಯದು, ಪ್ರತಿ ಕರ್ಮದ ಮೂಲಕ ಮಹಾದಾನಿ ಆಗುವವರು ಸರ್ವರ ಆಶೀರ್ವಾದಗಳಿಗೆ ಪಾತ್ರರಾಗುವುದರಿಂದ ಸರ್ವ ವರದಾನಗಳ ಪ್ರಾಪ್ತಿಯನ್ನು ತಮ್ಮ ಜೀವನದಲ್ಲಿ ಅನುಭವ ಮಾಡುತ್ತಾರೆ. ಆದ್ದರಿಂದ ನಿಮ್ಮನ್ನು ನೀವು ಪರಿಶೀಲನೆ ಮಾಡಿಕೊಳ್ಳಿ – ಯಾವುದೇ ದಾನ ಮಾಡುವುದರಲ್ಲಿ ಕಡಿಮೆ ಅಂತೂ ಮಾಡುವುದಿಲ್ಲ ತಾನೆ? ಮೂರೂ ರೀತಿಯ ದಾನವನ್ನು ಮಾಡುತ್ತಿದ್ದೇನೆಯೇ? ಮೂರರ ಲೆಕ್ಕವನ್ನು ಒಂದಿಲ್ಲ ಒಂದು ರೂಪದಲ್ಲಿ ಪೂರ್ಣ ಮಾಡಲೇ ಬೇಕು. ಅದಕ್ಕಾಗಿ ಉಪಾಯ, ಅವಕಾಶವನ್ನು ಹುಡುಕಿರಿ. ಅವಕಾಶ ಸಿಕ್ಕರೆ ಮಾಡುತ್ತೇನೆ ಎಂದಲ್ಲ. ಅವಕಾಶ ತೆಗೆದುಕೊಳ್ಳಬೇಕು, ಅವಕಾಶ ಸಿಗುವುದಿಲ್ಲ. ಇಂತಹ ಮಹಾದಾನಿ ಆಗುವುದರಿಂದ ಪ್ರಕಾಶ ಮತ್ತು ಶಕ್ತಿಯ ಗೋಳ ಕಂಡುಬರುವುದು. ನಿಮ್ಮ ತಲೆಯಿಂದ ಪ್ರಕಾಶದ ಗೋಳ ಕಂಡುಬರುವುದು ಮತ್ತು ಚಲನೆಯಿಂದ, ವಾಣಿಯಿಂದ ಜ್ಞಾನ ರೂಪಿ ಶಕ್ತಿಯ ಗೋಳ ಕಂಡುಬರುವುದು ಅರ್ಥಾತ್ ಬೀಜ ಕಂಡುಬರುವುದು. ಮಾಸ್ಟರ್ ಬೀಜ ರೂಪ ಆಗಿರುವಿರಲ್ಲವೆ. ಇಂತಹ ಪ್ರಕಾಶ ಮತ್ತು ಶಕ್ತಿಯ ಗೋಳ ಕಂಡುಬರುವವರು ಸಾಕ್ಷಾತ್ ಮತ್ತು ಸಾಕ್ಷಾತ್ಕಾರ ಮೂರ್ತಿ ಆಗುತ್ತಾರೆ. ತಿಳಿಯಿತೆ?

ಇಲ್ಲಿ ಈ ಹಾಲ್‌ನಲ್ಲಿ ಪ್ರಕಾಶ ಮತ್ತು ಶಕ್ತಿ ಎರಡೂ ಗೋಳಗಳು ತೋರಿಸಿರುವ ಯಾವುದಾದರೂ ಚಿತ್ರವಿದೆಯೇ? (ಕೆಲವರು ಲಕ್ಷ್ಮೀ ನಾರಾಯಣರದು ಮತ್ತು ಇನ್ನು ಕೆಲವರು ಬ್ರಹ್ಮಾ ಅವರದು ಎಂದು ಹೇಳಿದರು) ನೋಡಿ, ಚಿತ್ರವನ್ನು ನೋಡುವುದರಿಂದ ಚಹರೆಯೇ ಬದಲಾಗುತ್ತದೆ. ನೀವೂ ಸಹ ಇಂತಹ ಚೈತನ್ಯ ಚಿತ್ರ ಆಗಿರಿ ಅದನ್ನು ನೋಡುವುದರಿಂದಲೇ ಎಲ್ಲರ ಚರಿತ್ರೆ ಮತ್ತು ನಯನಗಳು, ಚಹರೆ ಬದಲಾಗಬೇಕು. ಈ ರೀತಿ ಆಗಬೇಕು ಮತ್ತು ಆಗುತ್ತಲೂ ಇದ್ದೀರಿ. ವರದಾನಿ ಭೂಮಿಯಲ್ಲಿ ಬರುವುದು ಅರ್ಥಾತ್ ವರದಾನದ ಅಧಿಕಾರಿ ಆಗುವುದಾಗಿದೆ. ಯಾವ ರೀತಿ ಯಾತ್ರೆಗೆ ಹೋಗುತ್ತಾರೆ, ಏಕೆ ಹೋಗುತ್ತಾರೆ? (ಪಾಪ ತೊಳೆಯಲು) ಆ ಭೂಮಿಯಲ್ಲಿ ಆ ವಿಶೇಷತೆ ಇದೆ ಅದಕ್ಕಾಗಿಯೇ ಹೋಗುತ್ತಾರೆ. ಈ ಭೂಮಿಯಲ್ಲಿ ಏನು ವಿಶೇಷತೆ ಇದೆ? ಯಾವುದು ವರದಾನಿ ಭೂಮಿ ಇದೆಯೋ ಅಲ್ಲಿ ವರದಾನವಂತೂ ಪ್ರಾಪ್ತಿ ಆಗಿಯೇ ಆಗುತ್ತದೆ. ತನ್ನಿಂದ ತಾನೆ ವರದಾನ ಸಿಗುತ್ತದಯಲ್ಲವೆ? ಬೇಡುವ ಅವಶ್ಯಕತೆ ಇಲ್ಲ. ಆದ್ದರಿಂದ ಇಂದಿನಿಂದ ಬೇಡುವುದು ಬಂದ್. ನಿಮ್ಮನ್ನು ನೀವು ಅಧಿಕಾರಿ ಎಂದು ತಿಳಿಯಿರಿ. ಒಳ್ಳೆಯದು.

ಅವ್ಯಕ್ತ ಮುರಳಿ 15-04-1971.

***ತ್ರಿಮೂರ್ತಿ ತಂದೆಯ ಮಕ್ಕಳ ತ್ರಿಮೂರ್ತಿ ಕರ್ತವ್ಯ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಕರ್ಮ ಅಥವಾ ಉತ್ಪತ್ತಿಯಾಗುವ ಪ್ರತಿ ಸಂಕಲ್ಪವನ್ನು ತ್ರಿಕಾಲದರ್ಶಿ ಆಗಿ ಕರ್ಮದಲ್ಲಿ ತರುವ ತ್ರಿಮೂರ್ತಿ.

2. ನಾನು ಇಡೀ ವಿಶ್ವದ ವಿಕರ್ಮಗಳ ಭಾರವನ್ನು ಹಗುರ ಮಾಡುವ ಮತ್ತು ಅನೇಕ ಆತ್ಮರ ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಿ ಮಾಡಿರುವ ವಿಶ್ವಕಲ್ಯಾಣಕಾರಿ.

3. ನಾನು ವಿನಾಶದ ಕರ್ತವ್ಯ ಮತ್ತು ಶುದ್ಧ ಸಂಕಲ್ಪಗಳ ಸ್ಥಾಪನೆಯ ಕರ್ತವ್ಯವನ್ನು ಜೊತೆ ಜೊತೆಗೆ ಮಾಡಿದ್ದೇನೆ.

4. ಆತ್ಮಿಕ ಯಂತ್ರವಾದ ನನ್ನ ಎದುರಿಗೆ ಯಾರು ಬಂದರೂ ಅವರ ಸಂಕಲ್ಪ, ಸ್ವರೂಪ, ಗುಣ ಮತ್ತು ಕರ್ತವ್ಯ ಪೂರ್ಣವಾಗಿ ಬದಲಾಗಿದೆ.

5. ನನ್ನ ಒಂದೊಂದು ಕ್ಷಣದ ಸಂದೇಶ ಶಕ್ತಿವಂತವಾಗಿರುವ ಕಾರಣ ಎಲ್ಲರಲ್ಲಿ ಅವಿನಾಶಿ ಸಂಸ್ಕಾರದ ರೂಪದಲ್ಲಿ ತುಂಬಿದೆ.

6. ನಾನು ಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಂಡು, ಅವಿನಾಶಿ ಮುದ್ರೆಯನ್ನು ಹಾಕಿಕೊಂಡಿದ್ದೇನೆ.

7. ನಾನು ವ್ಯರ್ಥವನ್ನು ಸಮಾಪ್ತಿ ಮಾಡಿರುವ ಸಮರ್ಥ ಸ್ವರೂಪ.

8. ನಾನು ಮನಸ್ಸಿನಿಂದ ಸರ್ವ ಶಕ್ತಿಗಳನ್ನು, ವಾಣಿಯಿಂದ ಜ್ಞಾನದಾನವನ್ನು, ಕರ್ಮದಿಂದ ಸರ್ವ ಗುಣಗಳ ದಾನವನ್ನು ಮಾಡುವ ಮಹಾದಾನಿ.

9. ನಾನು ನನ್ನ ದೃಷ್ಟಿ, ವೃತ್ತಿ, ಸ್ಮೃತಿಯ ಶಕ್ತಿಯಿಂದ ಎಷ್ಟೇ ಚಂಚಲ ಸ್ಥಿತಿಯಲ್ಲಿರುವವರಿಗೂ ಒಂದೇ ಕ್ಷಣದಲ್ಲಿ ಶಾಂತಿಯನ್ನು ಅನುಭವ ಮಾಡಿಸುವ ಮಹಾದಾನಿ.

10. ನಾನು ಸಂಕಲ್ಪ ಸಿದ್ಧಿಯನ್ನು ಹೊಂದಿ ಮನೋಸಂಕಲ್ಪಗಳಿಂದ ಸೇವೆ ಮಾಡುವ ಮಹಾದಾನಿ.

11. ನಾನು ವಾಚಾದಿಂದ ಜ್ಞಾನ ರತ್ನಗಳನ್ನು ದಾನ ಮಾಡಿ ಬಾಯಾರಿಕೆಯಿಂದ ಇರುವ ಅನೇಕ ಆತ್ಮರ ಬಾಯಾರಿಕೆಯನ್ನು ನೀಗಿಸಿದ್ದೇನೆ.

12. ನಾನು ಅಮೂಲ್ಯವಾದ ಮತ್ತು ಸಾರಯುಕ್ತವಾಗಿ ಮಾತನಾಡುವ ಮಾಸ್ಟರ್ ಜ್ಞಾನ ಸಾಗರನು.

13. ನಾನು ಸದಾ ಖುಷಿಯಿಂದ, ಹರ್ಷಿತವಾಗಿ ಮತ್ತು ಸಂತುಷ್ಟವಾಗಿದ್ದುಕೊಂಡು ವಾಚಾಶಕ್ತಿಯ ಮೂಲಕ ಸೇವೆ ಮಾಡುವ ಮಹಾದಾನಿ.

14. ನಾನು ಪ್ರತಿ ಕರ್ಮದಿಂದ ಗುಣ ದಾನ ಮಾಡಿರುವ ಕಾರಣ ನನ್ನ ಚಲನೆ ಮತ್ತು ಚಹರೆ ಎರಡೂ ಫರಿಶ್ತಾನ ಹಾಗೆ ಪ್ರಕಾಶಮಯವಾಗಿ, ಹಗುರವಾಗಿ ಎಲ್ಲರಿಗೂ ಅನುಭವವಾಗಿದೆ.

15. ನಾನು ಪ್ರತೀ ಕರ್ಮದಿಂದ ಮಹಾದಾನಿಯಾಗಿ ಸರ್ವರ ಆಶೀರ್ವಾದಗಳಿಗೆ ಪಾತ್ರನಾಗಿದ್ದೇನೆ.

16. ನನ್ನ ಮಸ್ತಕದಿಂದ ಪ್ರಕಾಶದ ಗೋಳ, ನನ್ನ ಚಲನೆಯಿಂದ, ಮಾತಿನಿಂದ ಜ್ಞಾನ ರೂಪಿ ಶಕ್ತಿಯ ಪ್ರಕಾಶ ಕಾಣಿಸುವ ಮಾಸ್ಟರ್ ಬೀಜರೂಪನು.

17. ನಾನು ಪ್ರಕಾಶ ಮತ್ತು ಶಕ್ತಿಯ ಗೋಳದಂತೆ ಕಾಣಿಸುವ ಸಾಕ್ಷಾತ್ಕಾರ ಮೂರ್ತಿ.

18. ನನ್ನ ಚೈತನ್ಯ ಚಿತ್ರದಿಂದ ಎಲ್ಲರ ಚರಿತ್ರೆ ಮತ್ತು ಚಹರೆ ಬದಲಾಗಿವೆ.